# ನುಡಿಯೊಳಗಾಗಿ ನಡೆಯದಿದ್ದರೆ

'ವಚನ ಎಂಬುದು ದಿನ ನಿತ್ಯದ ಸಾಮಾನ್ಯ ಬಳಕೆಯಲ್ಲಿ ಕೊಟ್ಟ ಮಾತು. ಎಲ್ಲದಕ್ಕೂ ಮಾತೇ ಮೂಲವಾಗಿದ್ದು ಅದು 'ಕೊಟ್ಟಮಾತು ಎಂಬರ್ಥದಲ್ಲಿದ್ದರೂ ಆಡಿದ್ದು. ಆಡಿದ್ದನ್ನು ಮುರಿಯಬಾರದ್ದು, ಆಡಿದ ಮೇಲೆ ನಡೆದುಕೊಳ್ಳಬೇಕಾದ್ದು ಎಂಬ ನಾನಾ ಅರ್ಥಗಳನ್ನು ಪಡೆಯುತ್ತದೆ. ಆದರೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈ ಪದಕ್ಕೆ ಹೆಚ್ಚು ಒತ್ತು ಸಿಕ್ಕಿದ್ದು ಹನ್ನೆರಡನೇ ಶತಮಾನದಲ್ಲಿ ಶರಣರು ಪ್ರಜ್ಞಾಪೂರ್ವಕವಾಗಿ ಬಳಸಲು ಆರಂಭಿಸಿದ ಮೇಲೆಯೇ.

ವಚನ ಎಂಬುದು ಮೂಲತಃ ಸಂಸ್ಕೃತ ಪದವಾಗಿದ್ದು ಶಿವಶರಣರ ಕಾಲದಲ್ಲಿ ಹೆಚ್ಚು ಬಳಸಲ್ಪಟ್ಟಿತು. ಶರಣರು 'ನಡೆ ನುಡಿಯ ಮೇಲೆ ಹೆಚ್ಚು ಗಮನವಿಟ್ಟು ಎಲ್ಲರಿಗೂ ನಡೆನುಡಿ ಒಂದೇ ಆಗಿರಬೇಕು, ನುಡಿದಿದ್ದನ್ನು ನಡೆದು ತೋರಿಸಬೇಕು ಎಂದು ಸಾರಿದರು. ಹೀಗಾಗಿ ನುಡಿ ಎಂದರೆ ಅದು ಕೊಟ್ಟ ವಚನ. ಆಡಿದ ಮೇಲೆ ಮೀರಬಾರದ ಕಟ್ಟಳೆ ಎಂಬಂತೆ ರೂಪಿತವಾಯಿತು. ಬಸವಣ್ಣ ಈ ನಡೆ ನುಡಿಯ ಬಗ್ಗೆ, ಅದು ಒಂದಾಗಿ ನಡೆಯಬೇಕಾದ ಬಗ್ಗೆ ಮತ್ತೆ ಮತ್ತೆ ಮಾತಾಡುತ್ತ, 'ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ, ಎನ್ನೊಳಗೇನೂ ಶುದ್ಧವಿಲ್ಲ ಎಂದು ಆತ್ಮ ನಿರೀಕ್ಷೆ ಮಾಡಿಕೊಳ್ಳುತ್ತಾನೆ. ಹೀಗಾಗಿಯೇ ಅವನು ನಡೆ ನುಡಿಯ ಬಗ್ಗೆ; ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಪಟಿಕದ ಶಲಾಕೆಯಂತೆ ಇರಬೇಕು ಎನ್ನುತ್ತಾನೆ. ಈ ಮಾತುಗಳನ್ನು ಮುಂದುವರೆಸಿ 'ಲಿಂಗರೂಪದ ಶಿವನೂ ಸಹ ಮೆಚ್ಚಿ ಹೌದು ಹೌದು ಎನ್ನುವಂತಿರಬೇಕು' ಅನ್ನುತ್ತಾನೆ. ಆಡಿದ್ದನ್ನು ನಡೆದು ತೋರಿಸದಿದ್ದರೆ ಅದು ವಚನ ಪಾತಕ ಮತ್ತು ವಚನ ದೋಷವಾಗಿದ್ದು, ಅವು ಬಿಡದೇ ನಮ್ಮನ್ನು ಕಾಡುತ್ತವೆ. ಹೀಗಾಗಿ ನುಡಿಗೆಡೆವ, ನಡೆಗೆಡೆವ ಪಾತಕಗಳನ್ನಾದರೂ ಯಾಕೆ ಮಾಡಬೇಕು ಎಂಬುದು ಅವನ ಅಭಿಪ್ರಾಯ. ಮಾತನ್ನು ಆಡುವುದರಲ್ಲಿಯೇ ಮೈ ಮರೆತು, ಮೆಚ್ಚಿಸುವುದಕ್ಕಾಗಿಯೇ ನುಡಿದು, ಮೆಚ್ಚಿಸುದರಲ್ಲಿಯೇ ತಮ್ಮನ್ನು ಕಳೆದುಕೊಳ್ಳುವವರನ್ನು 'ಮಾತಿನ ಬಣವೆಯ ಮುಂದಿಟ್ಟುಕೊಂಡು ಒಳಲೊಟೆಯ ನುಡಿವವರು ಎಂದು ಖಂಡಿಸುತ್ತಾನೆ. ಹೀಗಾಗಿ ನಡೆದು ತೋರಿಸಿದ ಬರಿಯ 'ಒಳಲೊಟೆಯ ಮಾತು ಶಬ್ದ ಸೂತಕವಾಗಿ ಪರಿಣಮಿಸುತ್ತದೆ ಎಂದು ಶಿವಶರಣರು ದೃಢವಾಗಿ ನಂಬಿದ್ದರು. ನಂಬಿದ್ದನ್ನು ನಡೆದು ತೋರಿಸಿದರು.

ವಿಶೇಷವಾಗಿ ಶಿವಶರಣರ ಕಾಲದಲ್ಲಿ ನಡೆ ನುಡಿಯ ಚಿಂತನೆ ಗಂಭೀರವಾಗಿ ಪರಿಗಣಿಸಲ್ಪಟ್ಟಿತು. ಈ ನಡೆ ನುಡಿಯ ಕಟ್ಟಿಗೆ ಸಿಲುಕುವುದರ ಮೂಲಕ, ಸಿಲುಕಿಸುವುದರ ಮೂಲಕವೇ ಶರಣರು 12ನೇ ಶತಮಾನದ ಕಾಯಕ ಜೀವಿಗಳ ಸಾಮೂಹಿಕ ಚಳವಳಿಗೆ ಕೇಂದ್ರವೊಂದನ್ನು ರೂಪಿಸಿದರು. 'ಅನುಭವ ಮಂಟಪ ಎಲ್ಲರೂ ಸೇರುವ, ಚರ್ಚಿಸುವ ವಚನಗಳನ್ನು ಕಟ್ಟುವ ಹಾಡುವ ವೇದಿಕೆಯಾಗಿಯೇ ಪರಿಣಮಿಸಿತ್ತು. ಮೊದಲಬಾರಿಗೆ ವೈದಿಕರು, ಅರಸರು, ಶ್ರಮಜೀವಿಗಳು, ಮಹಿಳೆಯರು, ಅಸ್ಪೃಶ್ಯರು ಎಲ್ಲಾ ರೀತಿಯ ವರ್ಗ, ವರ್ಣ, ಲಿಂಗ ತಾರತಮ್ಯಗಳನ್ನು ಮೀರಿ ಒಡನಾಡಿದರು. ದುಡಿಯದೇ ಉಣ್ಣಬಾರದು, ನಾಳೆಗೆಂದು ಕೂಡಿಡಬಾರದು, ಹೆಚ್ಚಾದುದನ್ನು ಪರರಿಗೆ ನೀಡಬೇಕು ಎಂಬ ಕಾಯಕ ದಾಸೋಹಗಳ ಶಿಸ್ತನ್ನು ಹಾಕಿಕೊಂಡರು. ಈ ಶ್ರಮಜೀವಿಗಳ ಚಳವಳಿ ನಡೆ ನುಡಿ ಒಂದಾಗಿಯೇ ಸಾಗಿ ಎಲ್ಲ ಮನುಷ್ಯ ನಿಮಿತ ಕೇಡಿನ ವ್ಯವಸ್ಥೆಗಳನ್ನು ಮೀರುವ ಪ್ರಯತ್ನ ಮಾಡಿತು.

ಮೀರಲಾಗದ ಮಾತನ್ನು ಆಡುವುದಕ್ಕಿಂತ ಮೊದಲು ಯೋಚಿಸಬೇಕು. 'ಮಾತು ಆಡಿದರೆ ಹೋತು, ಮುತ್ತು ಒಡೆದರೆ ಹೋತು' ಎಂಬ ಮಾತನ್ನು ಮಾತಿಗೆ ಸಂಬಂಧಪಟ್ಟ ಹಾಗೆಯೇ ಸಲಭವಾಗಿ ಬಳಸುತ್ತೇವೆ. ಆದರೆ 'ಸತ್ಯವನ್ನು ಶಿವನನ್ನಾಗಿ ನಂಬಿದವರಿಗೆ ಮಾತು ಬರಿಯ ಮಾತಲ್ಲ. ಅದು ಕೊಟ್ಟ ವಚನ. ನಡೆಸಿಕೊಡಲೇಬೇಕಾದ ವಚನ. 'ಕೊಟ್ಟ ಮಾತಿಗೆ ತಪ್ಪಿದರೆ ಮೆಚ್ಚನಾ ಪರಮಾತ್ಮನು ಎಂಬ ಗೋವಿನ ಹಾಡಿನ ಕತೆ ನಮ್ಮ ಮುಂದಿರುವ, ನಮ್ಮ ಪರಂಪರೆ ರೂಪಿಸಿದ ಅದ್ಭುತವಾದ ಕಥನವಾಗಿದೆ. ಇದೊಂದು ಕೊಟ್ಟ ಮಾತಿಗಾಗಿ, ಪರರ ಹಸಿವೆಯನ್ನು ತೀರಿಸಲಿಕ್ಕಾಗಿ ತನ್ನನೇ ತಾನು ಬಲಿಕೊಟ್ಟುಕೊಳ್ಳಲು ಸಿದ್ಧವಾದ ಪುಣ್ಯಕೋಟಿಯ ಜನಪ್ರಿಯ ಕಥನಕಾವ್ಯ. ಹಸಿವಿನಿಂದ ಪರಿತಪಿಸುತ್ತಿದ್ದ ಹುಲಿಯೊಂದು ಕಂದನಿರುವ ಗೋವಿನ ಮೇಲೆ ಆಕ್ರಮಿಸಲು ಹೊರಟು ಅದರ ಸತ್ಯ ಸಂಧತೆಯ ಎದುರು ತಲೆಬಾಗಿ ತಾನೇ ಗೋವಾಗಿ ಮರಣವನ್ನು ಅಪ್ಪಿಕೊಂಡ ಕಥೆ. ಮತ್ತೆ ನಡೆ ನುಡಿಯೇ ಸತ್ಯ ಸಂಧತೆಗಾಗಿ ಉದಾಹರಿಸಲ್ಪಡುವ ಪುರಾವೆಯಾಗಿದೆ.

ಒಂದು ಕಾಲದಲ್ಲಿ ಬೇಟೆಯಾಡುವ ಹುಲಿಗೂ ಒಂದು ಧರ್ಮವಿತ್ತು. ಬೇಟೆಗೊಳಗಾಗುವ ಬಲಿಗೂ ಒಂದು ಬದ್ಧತೆ ಇತ್ತು. ಬಲಿಯಾಗುವ ಪ್ರಾಣಿ ಯಾವುದಾದರೇನು ಅದು ಆಹಾರದ ಒಂದು ಆಕರ ಎಂಬಷ್ಟೇ ವ್ಯವಹಾರಿಕ ಪ್ರಜ್ಞೆ ಇತ್ತು. ಈ ಎಲ್ಲಾ ಸಹಜ ವ್ಯವಹಾರಗಳಿಗೂ ಒಂದು ಬಣ್ಣ ಬಳಿಯಲಾಗುತ್ತಿದೆ. ಕೃಷಿ ಮೂಲವಾದ ಸಮಾಜದಲ್ಲಿ ತಮ್ಮ ಆಯುಷ್ಯ ಕಳೆದುಕೊಂಡ ಎಲ್ಲ ಸಸ್ಯ ಪ್ರಾಣಿ ಹಾಗೂ ಮಾನವ ಸಮಕುಲಗಳು ಮಣ್ಣಿನಿಂದಲೇ ಹುಟ್ಟಿ ಮಣ್ಣಿನಲ್ಲೇ ಕರಗಿ ಹೋಗುವಂಥ ಸಹಜ ಉತ್ಪನ್ನಗಳು. ತನ್ನ ಅನುಕೂಲಕ್ಕೆ ತಕ್ಕಹಾಗೆ ಈ ಸಸ್ಯ ಪ್ರಾಣಿ ಮಾನವರನ್ನು ದೇವರನ್ನಾಗಿಸಿಕೊಂಡ ಅಥವಾ ದೇವರನ್ನಾಗಿ ಕಂಡುಕೊಂಡ 'ಕಲ್ಪವೃಕ್ಷ ಹಾಗೂ ಕಾಮಧೇನುಗಳೆಂಬ' ಕಲ್ಪನೆಗಳು ಅವು ಬದುಕಿದ್ದಾಗಲೂ, ಇಲ್ಲವಾದಾಗಲೂ ಮಾನವ ಸಂಕುಲಕ್ಕೆ ಉಪಯೋಗಕ್ಕೆ ಬರುವಂಥವು ಆಗಿವೆ. ಆದರೆ ನಾವು ಅವನ್ನು ಆಹಾರದ ಮೂಲವೆಂದು ಈಗಾಗಲೇ ಪರಿಗಣಿಸಿದ್ದರೂ ಅದನ್ನು 'ತಿನ್ನಬಹುದೇ, ಬಳಸಬಹುದೇ ಎನ್ನುವಂಥಹ ಅತಾರ್ಕಿಕ ಪ್ರಶ್ನೆಗಳನ್ನು ಎತ್ತುತ್ತಿದ್ದೇವೆ. ಇಲ್ಲ ಸಲ್ಲದ ರದ್ಧಾಂತಗಳನ್ನು ಹುಟ್ಟಿ ಹಾಕುತ್ತಿದ್ದೇವೆ. ಹಿಂದಿನವರು ಕಂಡುಕೊಂಡ, ಒಪ್ಪಿಕೊಂಡ ಸರಳ ಸತ್ಯಗಳನ್ನು ಒಪ್ಪಿಕೊಳ್ಳದೇ ಇರುವ 'ಗೋಮಾತೆ, ಗೋಮಾಂಸವೆಂಬ ಒಣ ಮಾತಿನ ಬಣಬೆಯನ್ನು ಮುಂದಕ್ಕೆ ಹರಡಿಕೊಂಡಿದ್ದೇವೆ. ಇದಕ್ಕಾಗಿಯೇ ವಚನಕಾರರ ಹಿರಿಮೆಯನ್ನು ಕಂಡುಕೊಂಡಿದ್ದು 'ನುಡಿಯೊಳಗಾಗಿ ನಡೆಯದಿದ್ದರೆ' ಎಂಬ ನಡೆನುಡಿ ಸಿದ್ಧಾಂತಗಳನ್ನು ಕಂಡುಕೊಂಡರು.

ಜೀವನವೆಂದರೆ ಒಪ್ಪಬೇಕಾದುದ್ದನ್ನು ಒಪ್ಪಿ ನಡೆದು ತೋರಿಸಬೇಕು. ಇದೇ ಬಸವಣ್ಣ ಹೇಳುವಂತೆ ಅಂತರಂಗ ಶುದ್ಧಿ ಬಹಿರಂಗ ಶುದ್ಧಿಯಾಗಿದೆ. ಹೀಗಾಗಿ ಸಮಸಮಾಜದ ಕಲ್ಪನೆಯನ್ನು ವಚನಗಳ ಮೂಲಕ ಕಟ್ಟಿ ತೋರಿಸಿದ್ದಾರೆ.

**■ ಅಮೃತಮತಿ**

## ಮಾತೇ ಮುತ್ತು

★ ಮದುವೆಗಳ ವೈಫಲ್ಯಕ್ಕೆ ಪ್ರೇಮದ ಕೊರತೆಯಲ್ಲ, ಸ್ನೇಹದ ಕೊರತೆಯೇ ಕಾರಣ.

—ಫ್ರೆಡ್ರಿಕ್ ನೀಷೆ

★ ದ್ವೇಷ ಬದುಕಿನಲ್ಲಿ ಕತ್ತಲೆ ಕವಿಸುತ್ತದೆ. ಪ್ರೇಮ ಬದುಕನ್ನು ಉದ್ದೀಪನಗೊಳಿಸುತ್ತದೆ.

—ಮಾರ್ಟಿನ್ ಲೂಥರ್ ಕಿಂಗ್

★ ಕಂಡ ದೈವಕೆಲ್ಲ ಕೈಮುಗಿದೇನಹುದು/ ಚಂಡ ಚತುರೋಪಾಯ ದಿಂದಲೇನಹುದು/ ತಂಡುಲದ ಹಿಡಿಯೊಂದು ತುಂಡು ಬಟ್ಟೆಯದೊಂದು/ ಅಂಡಲೆತವಿದಕೇನೊ ಮಂಕುತಿಮ್ಮ?

—ಡಿ.ವಿ.ಗುಂಡಪ್ಪ

★ ನಾನು ನಿಧಾನವಾಗಿಯೇ ನಡೆಯಬಹುದು. ಆದರೆ ಮುಂದಿಟ್ಟ ಹೆಜ್ಜೆಯನ್ನು ಎಂದಿಗೂ ಹಿಂದಕ್ಕೆ ಇಡುವುದಿಲ್ಲ.

—ಅಬ್ರಹಾಂ ಲಿಂಕನ್

★ ಗೆಳೆಯರು ತಮ್ಮ ಪ್ರೀತಿಯನ್ನು ಸಂಕಷ್ಟದ ಸಮಯದಲ್ಲಿ ತೋರುತ್ತಾರೆ, ಸಂತೋಷದ ಸಮಯದಲ್ಲಿ ಅಲ್ಲ.

—ಯೂರಿಪಿಡಿಸ್

★ ವ್ಯಕ್ತಿಯೊಬ್ಬನ ಗೆಳೆಯರೇ ಆತನ ಆಸ್ತಿಯನ್ನು ಅಳೆಯುವ ನಿಜ ಸಾಧನಗಳು.

—ಚಾರ್ಲ್ಸ್ ಡಾರ್ವಿನ್

★ ಎಲ್ಲವನ್ನೂ ಪುಸ್ತಕದಿಂದ ಕಲಿಯಲಾಗುವುದಿಲ್ಲ. ಹೊರಜಗತ್ತಿನಲ್ಲಿ ಅನುಭವ ಪಡೆದುಕೊಳ್ಳಿ.

—ಥಾಮಸ್ ಆಳ್ವ ಎಡಿಷನ್

★ ನಮ್ಮ ಅವಶ್ಯಕತೆಗಿಂತ ಏನು ಹೆಚ್ಚಾದರೂ ಅದು ವಿಷ. ಅದು ಅಧಿಕಾರ, ಐಶ್ವರ್ಯ, ಹಸಿವು, ಪ್ರೇಮ, ದ್ವೇಷ ಯಾವುದೂ ಇರಬಹುದು.

—ಚಾಣಕ್ಯ